ದಿಃ 11-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರಿದ** ಪಾಟೀ ಸವಾಲು: 2ನೇ ಪ್ರತಿವಾದಿ ಪರ ವಕೀಲರಿಂದ

ಲಕ್ಷ್ಮಿ ಗಲ್ಲಿಯಲ್ಲಿ ಇರುವ ಆಸ್ತಿಯ ಗ್ರಾಮ ಪಂಚಾಯತಿ ಸಂಖ್ಯೆ 134 ಇರುತ್ತದೆ. ಅದರ ವಿಸ್ತೀರ್ಣ ಗೊತ್ತಿಲ್ಲ. ಒಟ್ಟು 5 ಗುಂಟೆ ಇರಬಹುದು. ಅಲ್ಲಿ ಪತ್ರಾ ಶೆಡ್ಡಿನ ಮನೆ ಇರುತ್ತದೆ. ಸದರಿ ಮನೆಗೆ ಗ್ರಾಮ ಪಂಚಾಯತಿಯಲ್ಲಿ ಕರ ಪಾವತಿಸಿದ್ದೇವೆ. ಸದರಿ ಆಸ್ತಿಯು ನನ್ನ ದೊಡ್ಡಪ್ಪನ ಹೆಸರಿನಲ್ಲಿದೆ ಆದ್ದರಿಂದ ಕರ ಪಾವತಿ ರಶೀದಿಗಳು ಸಹ ನನ್ನ ದೊಡ್ಡಪ್ಪನ ಬಳಿ ಇರಬಹುದು.ಸದರಿ ಆಸ್ತಿಯ ಉತಾರೆಯಲ್ಲಿ ನನ್ನ ಮತ್ತು ನನ್ನ ತಾಯಿಯ ಹೆಸರು ಸಹ ಇದೆ ಎಂದರೆ ಸರಿ.

ಸರ್ವೆ ನಂಬರ 13/4ರ ಆಸ್ತಿಯು 20 ಗುಂಟೆ ಇರುತ್ತದೆ. ಸದರಿ ಆಸ್ತಿಯ ಉತಾರದಲ್ಲಿ ಸಹ ನನ್ನ ಮತ್ತು ನನ್ನ ತಾಯಿಯ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಜೋಳ ಬೆಳೆಯುತ್ತೇವೆ. ನೀರಾವರಿ ಇಲ್ಲ. ನನ್ನ ತಂದೆಗೆ ಇರುವ ಎಲ್ಲಾ ಆಸ್ತಿಗಳ ಬಗ್ಗೆ ನಮಗೆ ಮೊದಲಿನಿಂದಲೂ ಮಾಹಿತಿ ಇದೆ ಎಂದರೆ ಸರಿ. ಎಲ್ಲಾ ಆಸ್ತಿಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಸುಮಾರು 15-20 ವರ್ಷಗಳಿಂದ ನನ್ನ ತಂದೆಗೆ ಇರುವ ಎಲ್ಲಾ ಆಸ್ತಿಗಳ ಬಗ್ಗೆ ನನಗೆ ಗೊತ್ತಿತ್ತು.ನನ್ನ ತಂದೆ ತೀರಿಕೊಂಡ ನಂತರ ದಾವಾ ಆಸ್ತಿ ಏನಾಗಿದೆ ಎಂದು ನನಗೆ ಗೊತ್ತಾಯಿತು. ಆದ್ದರಿಂದ ನಾನು ದಾವೆ ಹೂಡಿದೆ. ನನ್ನ ತಂದೆ ತೀರಿಕೊಳ್ಳುವುದಕ್ಕಿಂತ ಮುಂಚೆ ನಮಗೆ ಎಷ್ಟು ಹೊಲಗಳು ಇವೆ ಎಂಬುದು ಗೊತ್ತಿತ್ತು.

ಈಗ ನನಗೆ 29 ವರ್ಷ. ನನಗೆ 18 ವರ್ಷ ಆದ ತಕ್ಷಣ ದಾವೆ ಹೂಡಲು ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಆಗ ನಾನು ನನ್ನ ತಂದೆಯವರನ್ನು ಆಸ್ಪತ್ರೆಗೆ

ಕರೆದುಕೊಂಡು ಹೋಗಿ ಬರುವುದು ಮಾಡುತ್ತಿದ್ದೆ ಆದ್ದರಿಂದ ತಕ್ಷಣ ದಾವೆ ಹೂಡಲು ಆಗಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡಾಗ ನನಗೆ 15 ವರ್ಷ ವಯಸ್ಸಾಗಿತ್ತು ಎಂದರೆ ಸರಿ.

ನನ್ನ ತಂದೆಯ 2ನೇ ಹೆಂಡತಿಯಾದ ಸಾವಕ್ಕ ಹಾಗೂ ಸಾವಕ್ಕನ ಮಗ ವಾಸಪ್ಪನಿಗೆ ಹಿಸ್ಸೆ ಬರುತ್ತದೆ ಎಂಬ ಕಾರಣಕ್ಕಾಗಿ ಈ ಸುಳ್ಳು ದಾವೆ ಹೂಡಿದ್ದೇನೆಂದರೆ ಸರಿಯಲ್ಲ. 2009 ರಲ್ಲಿ 2ನೇ ಪ್ರತಿವಾದಿಗೆ ನನ್ನ ತಂದೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರು ಕುಡಿಯುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಸಬ್ ರಜಿಸ್ಟ್ರಾರ ಕಚೇರಿಗೆ ಬಂದು ದಾವಾ ಆಸ್ತಿಯನ್ನು 2ನೇ ಪ್ರತಿವಾದಿಗೆ ನೊಂದಣಿ ಮಾಡಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ಆದ ನಂತರ 2ನೇ ಪ್ರತಿವಾದಿ ದಾವಾ ಆಸ್ತಿಯ ಕಬ್ಜೆ ಪಡೆದಕೊಂಡಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರೆಯಲ್ಲಿ 2ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವೆ ದಾಖಲಿಸುವ ಮುಂಚೆ ದಾವಾ ಆಸ್ತಿಯ ಪಹಣಿಯನ್ನು ನೋಡಿದ್ದೆನೆ. ದಾವಾ ಹೂಡಲು ನಾನೇ ಮಾಹಿತಿ ನೀಡಿದ್ದೆನೆ. ನನ್ನ ಪರವಾಗಿ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂಬ ಮಾಹಿತಿ ಇದೆ. ನನಗೆ ಕನ್ನಡ ಓದಲು ಬರುತ್ತದೆ.

ಈಗ ನಿಪಿ-1ರ ದಾಖಲೆಯ 1ನೇ ಪುಟದ ಕೊನೆಯ ಪ್ಯಾರಾವನ್ನು ಸಾಕ್ಷಿಗೆ ಓದಲು ಹೇಳಿದಾಗ ಸಾಕ್ಷಿ ಓದಿ ಹೇಳಿರುತ್ತಾರೆ. ನಿಪಿ-1 ರಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-1ರ ಪ್ರಕಾರ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದು ನನಗೆ ಮತ್ತು ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿ ಮಾರಾಟ ಮಾಡುವ

ಮುಂಚೆ ನನಗೆ ಮತ್ತು ನನ್ನ ತಾಯಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಿಪಿ-1ರ ಪ್ರಕಾರ ನನ್ನ ತಂದೆ ದಾವಾ ಆಸ್ತಿಯನ್ನು ಕುಟುಂಬದ ಅಡಚಣೆಗೊಸ್ಕರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅವಶ್ಯಕತೆಗಳಿಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಿಪಿ-1 ನಮಗೆ ಬಂಧನಕಾರಕ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ ಸರಿಯಿದೆ.

sd/-

1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.

**ಪಿ.ಡಬ್ಲೂ -1**